# ಗಾಯಕ್ವಾಡ್ ಅನುವಾದಿತ ಕೃತಿಗೆ ಅಕಾಡೆಮಿ ಪ್ರಶಸ್ತಿ

ಬೆಂಗಳೂರು: ಕೇಂದ್ರ ಸಾಹಿತ್ಯ ಅಕಾಡೆಮಿಯು ಅನುವಾದ ಸಾಹಿತ್ಯಕ್ಕೆ ನೀಡುವ 2019ನೇ ಸಾಲಿನ ಪ್ರಶಸ್ತಿಗೆ ವಿಠಲರಾವ್ ಟಿ. ಗಾಯಕ್ವಾಡ್ ಅವರು ಅನುವಾದಿಸಿರುವ 'ದಲಿತ ಸಾಹಿತ್ಯದ ಸೌಂದರ್ಯ ಪ್ರಜ್ಞೆ' ಕೃತಿ ಆಯ್ಕೆಯಾಗಿದೆ. ಪ್ರಶಸ್ತಿಯು ₹ 50ಸಾವಿರ ನಗದು ಹಾಗೂ ತಾಮ್ರಪತ್ರ ಒಳಗೊಂಡಿದೆ.

ಮರಾಠಿ ಲೇಖಕ ಶರಣ ಕುಮಾರ್ ಲಿಂಬಾಳೆ ಅವರ ಈ ಕೃತಿಯನ್ನು ವಿಠಲರಾವ್ ಕನ್ನಡಕ್ಕೆ ತಂದಿದ್ದಾರೆ. ಡಾ.ಆರ್. ಪೂರ್ಣಿಮಾ, ಎಸ್. ದಿವಾಕರ್ ಮತ್ತು ಡಾ. ಅರವಿಂದ ಮಾಲಗತ್ತಿ ಅವರಿದ್ದ ಆಯ್ಕೆ ಸಮಿತಿಯು ಕನ್ನಡ ವಿಭಾಗದ ಕೃತಿಯನ್ನು ಪ್ರಶಸ್ತಿಗಾಗಿ ಶಿಫಾರಸು ಮಾಡಿತ್ತು.

ವಿವಿಧ ಭಾಷೆಗಳಲ್ಲಿ ಆಯ್ಕೆಯಾದವರಿಗೆ ಮುಂದಿನ ದಿನಗಳಲ್ಲಿ ಸಮಾರಂಭ ಏರ್ಪಡಿಸಿ, ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಕಾಡೆಮಿ ಕಾರ್ಯದರ್ಶಿ ಕೆ. ಶ್ರೀನಿವಾಸರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.